**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಗಳು**

**ಹುಕ್ಕೇರಿ**

CC No. 881 /2023

CW-1/ PW-1

ಹೆಸರು : ಹಾಲಪ್ಪ ಬೀರಪ್ಪ ಕಮತೆ

ವಯಸ್ಸು : 38 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಕಡಹಟ್ಟಿ, ತಾಃ ಹುಕ್ಕೇರಿ.

(ದಿನಾಂಕಃ09.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ**

1. ಮೃತ ಬಸು ಬೀರಪ್ಪ ಕಮತೆ ನಮ್ಮ ಅಣ್ಣ. ದಿಃ 23.10.2022 ರಂದು ಮದ್ಯಾಹ್ನ 2 ಗಂಟೆಗೆ ನನ್ನ ಅಣ್ಣ ಬಸು ಬೀರಪ್ಪ ಕಮತೆ ತನ್ನ ಕೆಲಸದ ಸಲುವಾಗಿ ತನ್ನ ಹಿರೋ ಹೊಂಡ splendor ಮೋಟರ್ ಸೈಕಲ್ ನಲ್ಲಿ ಹುಕ್ಕೇರಿಗೆ ಬಂದಿದ್ದರು. ಅದೇ ದಿನ ರಾತ್ರಿ 7-00 ಗಂಟೆಗೆ ನನ್ನ ಅಣ್ಣನ ಮಗ ಅಜಿತ್ ನಮ್ಮ ಮನೆಗೆ ಬಂದ. ಆತ ನಾನು ಮನೆಯಲ್ಲಿದ್ದಾಗ ಹುಕ್ಕೇರಿ-ಗೋಕಾಕ್ ರಸ್ತೆಯಲ್ಲಿ ಗುಡಸ ಹತ್ತಿರ ನನ್ನ ಅಣ್ಣನ ಮೋಟರ್ ಸೈಕಲ್ ಟ್ರಾಕ್ಟರ್ ಗೆ ಡಿಕ್ಕಿ ಹೊಡೆಸಿ ಅಪಘಾತ ಆಗಿದೆ, ಹೋಗೋಣ ಬಾ ಎಂದು ತಿಳಿಸಿದ ಮೇರೆಗೆ ನಾನು, ಅಜಿತ್ ಮತ್ತು ನಮ್ಮ ತಮ್ಮ ಹಾಲಪ್ಪ ಕಮತೆ ಹಾಗೂ ನನ್ನ ಕಾಕ ಬಸು ಲಗಮಪ್ಪ ಕಮತೆ ಅಪಘಾತದ ಸ್ಥಳಕ್ಕೆ ಹೋದೆವು. ಅಲ್ಲಿ ಹೋಗಿ ನೋಡಿದಾಗ ನನ್ನ ಅಣ್ಣ ಶವ ಬಿದ್ದಿತ್ತು, ಅಲ್ಲಿ 2 ಟ್ರೇಲರ್ ಜೋಡಿಸಿದಂತಹ ಟ್ರಾಕ್ಟರ್ ಇತ್ತು. ಸದರಿ ಟ್ರಾಕ್ಟರ್ HMT ಕಂಪನಿಯ ಟ್ರಾಕ್ಟರ್ ಆಗಿತ್ತು. ಅದರ ನಂಬರ್ KA 49 T-82 ಆಗಿತ್ತು. ಸದರಿ ಟ್ರೇಲರ್ ಗಳಿಗೆ ನಂಬರ್ ಇರಲಿಲ್ಲ ಹಾಗೂ ಯಾವುದೇ ಇಂಡಿಕೇಟರ್ ಇಲ್ಲದೇ ಅದನ್ನು ರಸ್ತೆಯಲ್ಲಿ ನಿಲ್ಲಿಸಿದ್ದರು. ಸದರಿ ಟ್ರೇಲರ್ ನಲ್ಲಿ ಕಬ್ಬಿನ ಮೇವಿನ ಲೋಡ್ ಇತ್ತು. ಸದರಿ ಟ್ರೇಲರ್ ಮತ್ತು ಟ್ರಾಕ್ಟರ್ ಅನ್ನು ಯಾವುದೇ ಸಿಗ್ನಲ್ ಇಲ್ಲದೇ ಮತ್ತು ರಿಪ್ಲೇಕ್ಟರ್ ಇಲ್ಲದೇ, ಹೋಗಿ ಬರುವ ವಾಹನಗಳಿಗೆ ಅಡತಡೆಯಾಗುವಂತೆ ರಸ್ತೆಯ ಮೇಲೆ ನಿರ್ಲಕ್ಷ್ಯತನದಿಂದ ನಿಲ್ಲಿಸಿದರು.

2. ನನ್ನ ಅಣ್ಣ ಹುಕ್ಕೇರಿ ಕಡೆಯಿಂದ ಗೋಕಾಕ್ ಕಡೆಗೆ ನಮ್ಮ ಊರಿಗೆ ಬರುವಾಗ ಆತ ತನ್ನ ಮೋಟರ್ ಸೈಕಲ್ ಅನ್ನು ಸದರಿ ಟ್ರೇಲರ್ ಗೆ ಡಿಕ್ಕಿ ಹೊಡೆಸಿ ಅಪಘಾತ ಹೊಂದಿ, ಆತನಿಗೆ ಪೆಟ್ಟಾಗಿ ತೀರಿಕೊಂಡ. ನಾವು ಅಲ್ಲಿ ವಿಚಾರ ಮಾಡಿದಾಗ ಸಂಜೆ 6-30 ಕ್ಕೆ ಈ ಅಪಘಾತ ಆಗಿದೆ ಎಂದು ಗೊತ್ತಾಯಿತು. ಅಲ್ಲಿ ಟ್ರಾಕ್ಟರ್ ಡ್ರೈವರ್ ಇರಲಿಲ್ಲ, ಆತ ಓಡಿಹೋಗಿದ್ದ ಎಂದು ಗೊತ್ತಾಯಿತು. ನಂತರ 112 ಆಂಬುಲೆನ್ಸ ಗೆ ನಾನು ಫೋನ್ ಮಾಡಿ ಕರೆಯಿಸಿದೆ. ನಂತರ ಶವವನ್ನು ಹುಕ್ಕೇರಿಯ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದೆವು. ನಂತರ ಪೊಲೀಸ ಠಾಣೆಗೆ ಬಂದು ನಾನು ದೂರನ್ನು ಕೊಟ್ಟೆ. ದೂರನ್ನು ನಾನು ಹೇಳಿದಂತೆ ನನ್ನ ಮಾವ ನಿಂಗಪ್ಪ ಸಿದ್ದಪ್ಪ ಕುರುಬರ ಬರೆದರು. ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿದೆ.

3. ಸದರಿ ದೂರನ್ನು ಈಗ ನೋಡುತ್ತಿದ್ದೇನೆ. ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ದೂರು ಆಗಿದ್ದು, ಅದನ್ನು ನಿ.ಪಿ-1 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮಾರನೇ ದಿನ ಅಪಘಾತ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿದೆ. ಅಲ್ಲಿ ಪೊಲೀಸರು ಪಂಚರಾದ ಬೀರಪ್ಪ ಕಬ್ಬೂರು ಹಾಗೂ ಶಿವರಾಯಿ ಹೊನ್ನೂರು ಇವರ ಸಮಕ್ಷಮ ಸ್ಥಳದಲ್ಲಿ ಪಂಚನಾಮೆ ಮಾಡಿ ಕಚ್ಚಾ ನಕಾಶೆಯನ್ನು ತಯಾರಿಸಿ ಫೋಟೊ ತೆಗೆದರು. ಸ್ಥಳ ಪಂಚನಾಮೆಯನ್ನು ನಿ.ಪಿ-2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನಿ.ಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು. ಫೊಟೋಗಳನ್ನು ನಿ.ಪಿ-4 ಮತ್ತು ನಿ.ಪಿ-5 ಎಂದು ಗುರುತಿಸಲಾಯಿತು. ಫೊಟೋದಲ್ಲಿ ತನ್ನ ಇರುವಿಕೆಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

4. ನಂತರ ಹುಕ್ಕೇರಿ ಪೊಲಿಸ್ ಠಾಣೆಗೆ ಕರೆದುಕೊಂಡು ಬಂದು ಅಲ್ಲಿ ನಿಲ್ಲಿಸಿದ್ದ ಅಪಘಾತಕ್ಕೊಳಗಾದ ಮೋಟರ್ ಬೈಕ್ ಮತ್ತು ಟ್ರಾಕ್ಟರ್ ಮತ್ತು ಟ್ರೇಲರ್ ಗಳನ್ನು ಪೊಲೀಸರು ಪಂಚರಾದ ಬೀರಪ್ಪ ಕಬ್ಬೂರು ಹಾಗೂ ಶಿವರಾಯಿ ಹೊನ್ನೂರು ಇವರ ಸಮಕ್ಷಮ ಸ್ಥಳದಲ್ಲಿ ವಾಹನ ತಡೆಹಿಡಿದ ಪಂಚನಾಮೆ ಮಾಡಿ ಫೋಟೊ ತೆಗೆದರು. ವಾಹನ ತಡೆಹಿಡಿದ ಪಂಚನಾಮೆಯನ್ನು ನಿ.ಪಿ-6 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-6(ಎ) ಎಂದು ಹಾಗೂ ವಾಹನಗಳ ಫೊಟೋಗಳನ್ನು ನಿ.ಪಿ-7 ರಿಂದ ನಿ.ಪಿ-22 ಎಂದು

ಗುರುತಿಸಲಾಯಿತು. ಫೋಟೋದಲ್ಲಿ ತನ್ನ ಇರುವಿಕೆಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ದಿಃ 02.11.2022 ರಂದು ಪೊಲೀಸರು ನನ್ನನ್ನು ಮತ್ತೊಮ್ಮೆ ಪೊಲೀಸ ಠಾಣೆಗೆ ಕರೆಸಿದ್ದು ಅಲ್ಲಿ ಅಪಘಾತಪಡಿಸಿದಂತಹ ಟ್ರಾಕ್ಟರ್ ನ ಡ್ರೈವರನನ್ನು ತೋರಿಸಿದರು. ಆ ದಿನ ಟ್ರಾಕ್ಟರ್ ಮತ್ತು ಟ್ರೇಲರ್ ಅನ್ನು ರಸ್ತೆಯ ಮೇಲೆ ನಿರ್ಲಕ್ಷ್ಯತನದಿಂದ ನಿಲ್ಲಿಸಿ ಹೋದನು ಇವನೇ ಎಂದು ತೋರಿಸಿದರು. ಆತನ ಹೆಸರು ವಿಚಾರ ಮಾಡಿದಾಗ ಸುರೇಶ ಬೆಳಗಲಿ ಸಾಃ ಮೆಳವಂಕಿ, ತಾಃ ಗೋಕಾಕ ಎಂದು ತಿಳಿಸಿದರು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು ಸಮಯ ನೀಡಲಾಯಿತು.</u>**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

**Sd/-**
(ಆದಿತ್ಯ ಆರ್. ಕಲಾಲ್)
**ಸಿ ಜೆ ಮತ್ತು ಜೆ ಎಂ ಎಫ್ ಸಿ, ಹುಕ್ಕೇರಿ.**